ವೆಚ್ಚ. ಮೀನು ಮಾರಾಟದಲ್ಲಿ ಖಾಸಗಿಯವರಿಂದ ಹೆಚ್ಚಿನ ಸ್ಪರ್ಧೆ. ಕರಾವಳಿ ಮೀನು ಉತ್ಪಾದನೆಯಲ್ಲಿ ಏರುಪೇರು.

ಈ ನಿಗಮದ ಮಾಸಿಕ ಆದಾಯ ರೂ. 11.00 ಲಕ್ಷ. ಆದರೆ ಮಾಸಿಕ ಖರ್ಚು ರೂ. 17.00 ಲಕ್ಷ. ಈ ಖರ್ಚನ್ನು ಕಡಿಮೆ ಮಾಡಲು, ಆಡಳಿತ ಮಂಡಳಿಯು ಈಗಾಗಲೇ ತದಡಿ ಮತ್ತು ಕುಳಾಯಿ ಮಂಜುಗಡ್ಡೆ ಕಾರ್ಖಾನೆಗಳನ್ನು ಖಾಸಗಿಯವರಿಗೆ ಕ್ರಮವಾಗಿ ರೂ. 16.00ಲಕ್ಷ ಮತ್ತು ರೂ. 12.50 ಲಕ್ಷಕ್ಕೆ ಗುತ್ತಿಗೆ ರೂಪದಲ್ಲಿ ಕೊಟ್ಟಿದೆ. ನಿಗಮವು ಉಳ್ಳಾಲ ಮಂಜುಗಡ್ಡೆ ಕಾರ್ಖಾನೆಯನ್ನೂ ಕೂಡ ರೂ. 4.02 ಲಕ್ಷಗಳಿಗೆ ಗುತ್ತಿಗೆಗೆ ಕೊಡಲು ನಿರ್ಧರಿಸಿದೆ. ಈ ನಿಗಮದಲ್ಲಿ ಒಟ್ಟು 325 ಖಾಯಂ ಮತ್ತು ದಿನಗೂಲಿ ನೌಕರರು ಕೆಲಸ ಮಾಡುತ್ತಿದ್ದಾರೆ. ಇವರನ್ನು ಈ ನಿಗಮದಲ್ಲಿ ಮುಂದುವರೆಸಲಾಗುವುದು.

ಕರ್ನಾಟಕ ರಾಜ್ಯ ಮಹಾಲೇಖಪಾಲರು, ಬೆಂಗಳೂರು ಇವರು ಈ ನಿಗಮದ ಲೆಕ್ಕ ಪರಿಶೋಧನಾ ಕಾರ್ಯವನ್ನು 1985ರಿಂದ 1989ರ ತನಕ ಮಾಡುವಾಗ ಕೆಲವು ಅಕ್ರಮಗಳು ನಡೆದಿರುವುದಾಗಿ ತಿಳಿಸಿದ್ದಾರೆ. ಇವುಗಳನ್ನು ಸರ್ಕಾರವು ಪರಿಶೀಲಿಸಿ, ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಸೂಕ್ತ ಶಿಸ್ತು ಕ್ರಮವನ್ನು ತೆಗೆದುಕೊಳ್ಳಲಾಗುವುದು.

ಈ ನಿಗಮವು ಸುಸೂತ್ರವಾಗಿ ನಡೆಯಬೇಕೆಂದು ಮಾನ್ಯ ಸದಸ್ಯರು ನೀಡಿರುವ ಸಲಹೆಯನ್ನು ಒಪ್ಪಿ ಇದರ ಬಗ್ಗೆ ಸೂಕ್ತ ಯೋಜನೆಯನ್ನು ಹಾಕಿಕೊಳ್ಳಲಾಗುವುದು.

6. ಚಿಕ್ಕಮಗಳೂರು ಜಿಲ್ಲಾಪರಿಷತ್ತಿಗೆ ನೀರು ಸರಬರಾಜಿಗಾಗಿ ಹೆಚ್ಚುವರಿ ಅನುದಾನ ಬಿಡುಗಡೆ

ಶ್ರೀಮತಿ ಮೋಟಮ್ಮ (ಮೂಡಿಗೆರೆ):– ಚಿಕ್ಕಮಗಳೂರು ಜಿಲ್ಲಾ ಪರಿಷತ್ತಿನಲ್ಲಿ 1992–93ರ ಸಾಲಿಗೆ ರಾಷ್ಟ್ರೀಯ ಗ್ರಾಮೀಣ ನೀರು ಸರಬರಾಜು ಮತ್ತು ತ್ವರಿತ ನೀರು ಸರಬರಾಜು ಯೋಜನೆಯಲ್ಲಿ ಲೆಕ್ಕ ಶೀರ್ಷಿಕೆ ಸಂಖ್ಯೆ 2215 ಒಟ್ಟು 50 ಲಕ್ಷ ರೂಪಾಯಿಗಳ ಹೆಚ್ಚುವರಿ ಅನುದಾನವು ಜಿಲ್ಲಾ ಪರಿಷತ್ (ಚಿಕ್ಕಮಗಳೂರಿಗೆ) ಅಗತ್ಯವಿದ್ದು ಕೂಡಲೇ ಬಿಡುಗಡೆ ಮಾಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

(ಪ್ರೊ ಬಿ. ಎಂ. ಇದಿನಬ್ಬರವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):–

ಮಾನ್ಯ ಅಧ್ಯಕ್ಷರೇ, ಚಿಕ್ಕಮಗಳೂರು ಜಿಲ್ಲೆಗೆ ಹಣವನ್ನು ಬಿಡುಗಡೆ ಮಾಡುವುದರಲ್ಲಿ ಸ್ವಲ್ಪ ತೊಂದರೆ ಉಂಟಾಗಿದ್ದು ನಿಜ. 1992–93ನೇ ಸಾಲಿನಲ್ಲಿ ರೂ. 99 ಲಕ್ಷ ಅಲೊಕೇಷನ್. ಆದರಲ್ಲಿ 66 ಲಕ್ಷ ರೂಪಾಯಿಗಳು ಮಾತ್ರ ಬಿಡುಗಡೆಯಾಗಿದೆ. ಇನ್ನು ರೂ. 33 ಲಕ್ಷ ಬಿಡುಗಡೆಯಾಗಬೇಕಾಗಿದೆ. ಇದಕ್ಕೆ ಮುಖ್ಯ ಕಾರಣವೇನೆಂದರೆ ಗೌವರ್ನಮೆಂಟ್ ಆಫ್ ಇಂಡಿಯಾದಿಂದ 31 ಕೋಟಿ ಏನು ಇದೆ. ಆದರಲ್ಲಿ 22 ಕೋಟಿ ರೂಪಾಯಿಗಳು ಬಂದಿದೆ. ಆದ್ದರಿಂದ ಈ ಜಿಲ್ಲೆಗೆ ತೊಂದರೆಯಾಗಿದೆ. ಈ ಕಾರ್ಯಕ್ರಮಕ್ಕೆ ತೊಂದರೆಯಾಗದಂತೆ ನೋಡಿಕೊಳ್ಳುತ್ತೇವೆ.

7. ವಿದೇಶಗಳಲ್ಲಿ ಉದ್ಯೋಗ ದೊರಕಿಸಿಕೊಂಡ ರಾಜ್ಯ ಸರ್ಕಾರದ ನೌಕರರಿಗೆ ವೇತನ ಸಹಿತ ರಜೆ ಮಂಜೂರು

ಶ್ರೀ ವಿಜಯಕುಮಾರ್ ಶೆಟ್ಟಿ (ಸುರತ್ಕಲ್):– ಮಾನ್ಯ ಅಧ್ಯಕ್ಷರೇ, ರಾಜ್ಯ ಸರ್ಕಾರದ ಕಛೇರಿಗಳಲ್ಲಿ